

ಮೇಘ ಮಲ್ಹಾರ ವಿಶೇಷ

# ಮಾಯದಂತ ಮಳೆ ಬಂತಣ್ಣ

■ ಬಿ.ಕೆ. ಸುಮತಿ

**ಮಾಯದಂತ ಮಳೆ ಬಂತಣ್ಣ**
**ಮದಗಾದ ಕೆರೆಗೆ**
**ಅಂಗೈನಷ್ಟು ಮೋಡವಾಗಿ**
**ಭೂಮಿ ತೂಕದ ಗಾಳಿ ಬೀಸಿ...**

ಈ ಹಾಡು ಕೇಳದವರಾರು?

ಎಂಥಾ ವರ್ಣನೆ! ಭೂಮಿ ತೂಕದ ಗಾಳಿ ಅಂತೆ! ಗುಡುಗುಡು ಗುಡುಗು ಬಂತಂತೆ! ಗಂಗವ್ವ ತಾಯಿ, ಝುಳ ಝುಳ ಹರಿದು ಬಂದಳಂತೆ!

ಮಳೆ ಬಂದಾಗ ಹಾಡುವ ಆನಂದದ ಹಾಡು ಇದಾದರೆ, ಮಳೆ ಬರದಿದ್ದಾಗ 'ಹುಯ್ಯೋ ಹುಯ್ಯೋ ಮಳೆರಾಯ, ತೋಟಕ್ಕೆ ನೀರಿಲ್ಲ, ಬಾರೋ ಮಳೆರಾಯ, ಕರುಣೆ ತೋರು...' ಎಂಬ ಅರ್ಥದ ನೋವಿನ ಹಾಡುಗಳು...

## ಮಳೆ ಅಂದರೆ ಹಬ್ಬ

ಒಂದು ಮಳೆ ಬಿತ್ತನೆಗೆ, ಮತ್ತೊಂದು ಮಳೆ ಬೇರೆ ಕೆಲಸಗಳಿಗೆ, ಹೀಗೆ ವಿಂಗಡಿಸುತ್ತಾರೆ. ಅಶ್ವಿನಿ ಮಳೆ ಅರಿಶಿನದ ಹಾಗೆ, ಭರಣಿ ಮಳೆ ಧರಣಿ ಬದುಕುತ್ತೆ, ಕೃತ್ತಿಕ ರೋಹಿಣಿ ಮಳೆ ಅಂದ್ರೆ ಎಲ್ಲೆಡೆ ಕೆಸರು, ಮೃಗಶಿರ ಮಳೆಯೆಂದರೆ ಒಳ್ಳೆಯ ಬೆಳೆ. ಸ್ವಾತಿ ಮಳೆ ಬಿಡುವುದೇ ಇಲ್ಲ. ಚಿತ್ತೆ ಮಳೆ ಚಿತ್ರದ ಕಳೆ... ಹೀಗೆಲ್ಲ ಹೇಳುತ್ತಾರೆ ಜನಪದರು.

## ನಮ್ಮ ಕವಿಗಳೇನು ಸುಮ್ಮನಿದ್ದಾರೆಯೇ?

ಕವಿ ಕುಲ ಗುರು ಕಾಳಿದಾಸ, 'ಮಳೆಗಾಲ ಅಂದರೆ ರಾಜನ ಹಾಗೆ ಕಪ್ಪು ಮೋಡಗಳು ವಿಜಯ ಧ್ವಜ ಹೊತ್ತ ಆನೆಯ ಹಾಗೆ, ಎಂದು ವರ್ಣಿಸುತ್ತಾನೆ. ಮಳೆ ಬಂದಾಗ, ಭೂಮಿ ಸುಂದರವಾಗಿ ನಗುತ್ತಾಳಂತೆ, ಪ್ರೇಮಿಗಳ ಹೃದಯದಲ್ಲಿ ಆಸೆ ಹುಟ್ಟಿಸುತ್ತದೆಯಂತೆ ಮಳೆ.

ಬೇಂದ್ರೆಯವರು ಕಾಣಿಸುವ ಮಳೆ ಬೇರೆಯೇ. ಕಡಲಿಗೆ ಬಂತು ಶ್ರಾವಣ ಕುಣಿದಾಂಗ ರಾವಣ ಎಂದು ಹೇಳುತ್ತಾರೆ. ಚಿತ್ತಿ ಮಳೆಯೇ ನೀ ಕುರುಡು ಪ್ರೀತಿ ಹಾಂಗೆ ಎನ್ನುತ್ತಾರೆ. 'ರಾಮಾಯಣ ದರ್ಶನಂ'ನಲ್ಲಿ ಕುವೆಂಪು ಅವರು, ವಿವಿಧ ಭಾವಗಳಿಗೆ, ಮಳೆಯನ್ನು ಬಳಸುತ್ತಾರೆ. 'ಕೆರೆಗಳು, ಕಾವಿ ತೊರೆದು ಮುತ್ತಿನ ನೀರಿನ ಹಾಗೆ ಕಾಣುತ್ತಿತ್ತು' ಎಂದು ಒಂದೆಡೆ ಬಣ್ಣಿಸುತ್ತಾರೆ. ಸೋನೆ ಮಳೆ ನೂಲಿನ ಹಾಗೇ ಎನ್ನುತ್ತಾರೆ.